ಇ.ಪಿ.ನಂ.89/2021

ಡಿ ಡಬ್ಲ್ಯೂ: 1

ದಿನಾಂಕ 04.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಡಿಕ್ರಿದಾರರ ಪರ ವಕೀಲರಿಂದಃ**

ನಾನು ದಾವಾ ಆಸ್ತಿಯನ್ನು ಪರಮೇಶ್ವರಲಪ್ಪ ಗೌಳಿಯವರಿಂದ ಖರೀದಿಸಿತ್ತೇನೆ. ಸದರಿ ಖರೀದಿಸಿದ ಆಸ್ತಿಯ ಪೂರ್ವಕ್ಕೆ ವಿರುಪಾಕ್ಷಪ್ಪ, ಪಶ್ಚಿಮಕ್ಕೆ ನಾಗಮ್ಮ ಮಡಿಮಾಳರ ರವರ ಆಸ್ತಿ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಕರಿಬಸಪ್ಪ ಚಕ್ರಸಾಲಿಯವರ ಆಸ್ತಿ ಇರುತ್ತದೆ. ಸದರಿ ಆಸ್ತಿ ಮತ್ತು ಅಕ್ಕಪಕ್ಕದ ಮನೆಗಳು ಒಂದಕ್ಕೊಂದು ಹೊಂದಿಕೊಡಿರುತ್ತವೆ ಎಂದರೆ ಸರಿ. ಸಾಕ್ಷಿಗೆ ನಿಪಿ 7 ರ ಪೋಟೋಗಳಲ್ಲಿ ಕಾಣಿಸುವ ವ್ಯಕ್ತಿಗಳು ನಾನು, ವಿರುಪಾಕ್ಷಪ್ಪ ಮತ್ತು ಆತನ ಮಗ ಆನಂದ ಆಗಿರುತ್ತೇವೆ. ನಿಪಿ 9 ರ ಪೋಟೋದಲ್ಲಿ ಕಾಣುವ ತಗಡಿನ ಮೇಲಿನ ಮನೆ ವಿರುಪಾಕ್ಷಪ್ಪನ ಮನೆ ಎಂದರೆ ಸರಿ. ಸದರಿ ಮನೆಗೆ ನಿಪಿ 10 ರಲ್ಲಿ ಕಾಣಿಸುವ ಮೆಟ್ಟಿಲುಗಳ ಮೂಲಕ ಒಡಾಡಬೇಕು ಎಂದರೆ ಸರಿ.

**2.** ವಿರುಪಾಕ್ಷಪ್ಪನ ಮನೆಗೆ ನಿಪಿ 11 ರಲ್ಲಿ ಕಾಣಿಸುವ ಬೀರೆಶ್ವರ ಅಂಗಡಿಯ ಎದುರುಗಡೆಯಿಂದ ಹತ್ತಿ ಹೋಗಬೇಕು ಎಂದರೆ ಸರಿಯಲ್ಲ. ಓ ಎಸ್ ನಂ 203/2018 ರ ದಾವೆಯಲ್ಲಿ ಸದರಿ ಅಂಗಡಿಯ ಮುಂದಿನ ಮೆಟ್ಟಿಲುಗಳ ಮೂಲಕ ವಾದಿ ವಿರುಪಾಕ್ಷಪ್ಪನ ಮನೆಗೆ ಒಡಾಡಲು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಓ ಎಸ್ ನಂ 147/1959 ಮತ್ತು 6/1959 ರ ದಾಖಲೆಗಳನ್ನು ಹಾಜರು ಪಡಿಸಿರುತ್ತೇವೆ ಎಂದರೆ ಸರಿ. ಸದರಿ ಎಲ್ಲಾ ಡಿಕ್ರಿಗಳಂತೆ ವಿರುಪಾಕ್ಷಪ್ಪ ಮತ್ತು ಆತನ ಮಕ್ಕಳು ನಿಪಿ 11 ರಲ್ಲಿ ಕಾಣಿಸುವ ಅಂಗಡಿಯ ಮುಂಬಾಗದ ಮೆಟ್ಟಿಲುಗಳ ಮೂಲಕ ಒಡಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅರ್ಜಿದಾರರ ಪರ ಯಾವುದೇ ಡಿಕ್ರಿ ಆಗಿರುವುದಿಲ್ಲ ಎಂಬ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**3.** ನಾನು ಈ ಹಿಂದಿನ ಡಿಕ್ರಿಗಳನ್ನು ಪಾಲಿಸಲು ಬಾಧ್ಯಸ್ತನಾಗಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ದಾವಾ ಸ್ವತ್ತಿನ ಮೆಟ್ಟಿಲುಗಳಲ್ಲಿ ಒಡಾಡಲು ಅಡ್ಡಿ ಪಡಿಸಿದ್ದರು ಸಹ ನಾನು ಅಡ್ಡಿ ಪಡಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿದಾರರು ತಮ್ಮ ಮನೆಗೆ ತಮ್ಮ ಮನೆಯ ಎದುರುಗಡೆ ಮೂಲಕ ಒಡಾಡಬಹುದು. ಸಾಕ್ಷಿಯು ಈ ಹಿಂದೆ ಡಿಕ್ರಿದಾರರ ಮನೆಯ ಎದುರುಗಡೆ ಇದ್ದ ಮೆಟ್ಟಿಲುಗಳನ್ನು ಕೆಡವಿರುವುದಾಗಿ ನುಡಿಯುತ್ತಾರೆ. ಈ ಹಿಂದೆ ಮೆಟ್ಟಿಲುಗಳು ಇದ್ದ ಕುರಿತು ನಾನು ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇನೆ.

**4.** ನಿಪಿ 11 ರ ಅಂಗಡಿ ಖರೀದಿಸಿದ ನಂತರ ಮುಂಬಾಗಕ್ಕೆ ತಗಡಿನ ಶೀಟನ್ನು ಹಾಕಿರುತ್ತೇನೆ ಎಂದರೆ ಸಾಕ್ಷಿಯು ಹಿಂದೆ ಇದ್ದ ಹಂಚುಗಳನ್ನು ತೆಗೆದು ಶೀಟುಗಳನ್ನು ಹಾಕಿರುವುದಾಗಿ ನುಡಿಯುತ್ತಾರೆ. ಸದರಿ ಶೀಟುಗಳನ್ನು ಅಳವಡಿಸಿದ ಜಾಗದ ಮೂಲಕ ಡಿಕ್ರಿದಾರರು ತಮ್ಮ ಮನೆಗೆ ಒಡಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಕುರಿತು ನನ್ನ ವಿರುದ್ಧ ಪೋಲಿಸ ದೂರನ್ನು ಸಹ ನಿಡಿ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾವು ಡಿಕ್ರಿಯನ್ನು ಉಲ್ಲಂಘನೆ ಮಾಡಿದ ಕಾರಣ ಈ ಪ್ರಕರಣ ದಾಖಲಿಸಲಾಗಿದೆ ಎಂದರ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.